ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 14- 17
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಭೂ ದಾಖಲಾತಿ ಪದ್ಧತಿ: ಒಂದು ಅವಲೋಕನ

**ಚನ್ನಪ್ಪ ಕೊಣನವರ***

*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಇಂದಿನ ಸಮಾಜದಲ್ಲಿ ವ್ಯಕ್ತಿಯೊಬ್ಬನಿಗಿರುವ ಪ್ರಾಮುಖ್ಯತೆ ಆ ವ್ಯಕ್ತಿಯ ಅಸ್ತಿತ್ವ ಸಾಬೀತುಪಡಿಸುವಂತಹ ಪ್ರಮಾಣ ಪತ್ರಗಳಿಗೂ ಇದೆ. ಜನನ-ಮರಣ, ಇದರ ನಡುವಿನ ಜೀವನದ ಪ್ರತಿ ಹಂತದಲ್ಲೂ ಪ್ರಮಾಣ ಪತ್ರಗಳ ಅವಶ್ಯಕತೆಯಿದೆ. ಜನನ-ಮರಣ, ಜಾತಿ, ವಾಸಸ್ಥಳ, ಆದಾಯ, ಶಿಕ್ಷಣ, ಆಸ್ತಿಗೆ ಸಂಬಂಧಿಸಿದ ವಿವಿಧ ಬಗೆಯ ಪ್ರಮಾಣಪತ್ರಗಳು ಅಸ್ತಿತ್ವದಲ್ಲಿದೆ. ಈ ಪದ್ಧತಿ ಒಮ್ಮೆಲೆ ಬಂದಂತಹದ್ದಲ್ಲ. ಬದಲಿಗೆ ಕಾಲಾಂತರದಲ್ಲಿ ನಿಧಾನವಾಗಿ ಅಭಿವೃದ್ಧಿ ಹೊಂದಿರುವಂತಹದ್ದು. ಇಂತಹ ಹಲವಾರು ಪ್ರಮಾಣ ಪತ್ರಗಳಲ್ಲಿ ಭೂ ದಾಖಲಾತಿ ಪ್ರಮಾಣ ಪತ್ರಗಳು ಕೂಡ ಪ್ರಮುಖವಾದುದಾಗಿವೆ. ಪ್ರಸ್ತುತ ಲೇಖನದಲ್ಲಿ ಭೂ ದಾಖಲೆಗಳು ಬೆಳೆದು ಬಂದ ಬಗೆ ಮತ್ತು ಮಹತ್ವವನ್ನು ವಿವರಿಸಲಾಗಿದೆ.*

***Keywords:*** *ಭೂ ದಾಖಲಾತಿ, ಭೂ ಒಡೆತನ, ಪ್ರಮಾಣ ಪತ್ರ, ಇತಿಹಾಸ.*

## ಪೀಠಿಕೆ

ದಾಖಲಾತಿ ಅಥವ ಪ್ರಮಾಣ ಪತ್ರಗಳು ಮಾನವನ ವ್ಯವಹಾರಿಕ ಜೀವನದಲ್ಲಿ ಪ್ರಮುಖವಾದ ಪಾತ್ರವಹಿಸುತ್ತದೆ. ಭೂ ಹಿಡುವಳಿ ಹೊಂದುವುದು ಎಷ್ಟು ಮುಖ್ಯವಾಗಿದೆಯೋ ಅಷ್ಟೇ ಅವುಗಳ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ ಹೊಂದಿರುವುದು ಮುಖ್ಯವಾಗಿದೆ. ಸರಿಯಾದ ದಾಖಲಾತಿ ಇಲ್ಲದಿದ್ದರೆ ಎಷ್ಟೆ ವರ್ಷ ಸಾಗುವಳಿ ಮಾಡಿದರೂ ಅವುಗಳ ಮಾಲೀಕತ್ವ ಸಾಗುವಳಿದಾರನಿಗೆ ಸಿಗದಿರುವುದನ್ನು ಕಾಣಬಹುದಾಗಿದೆ. ಈ ಹಿನ್ನಲೆಯಲ್ಲಿ ಭೂ ದಾಖಲಾತಿಗಳ ಹುಟ್ಟು, ರಚನೆ, ಸಂರಕ್ಷಣೆ ಬೆಳೆದು ಬಂದ ಬಗೆಗಿನ ಅಧ್ಯಯನ ತುಂಬಾ ಕುತೂಹಲಕಾರಿಯಾಗಿದೆ.

## ಪ್ರಾಚೀನ ಕಾಲದಲ್ಲಿ ಭೂ ದಾಖಲಾತಿಗಳು

ಭೂ ದಾಖಲಾತಿ ಇಂದು-ನಿನ್ನೆಯದಲ್ಲ ಇದು ತನ್ನದೇಯಾದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ಪ್ರಾಚೀನ ಸಿಂಧೂ, ಬ್ಯಾಬಿಲೋನಿಯಾ ನಾಗರಿಕತೆಗಳ ಕಾಲದಲ್ಲಿ ಇವು ಮೊಟ್ಟ ಮೊದಲು ಜನ್ಮತಾಳಿವೆ. ವೇದಗಳು ಮತ್ತು ಬೌದ್ಧ ಗ್ರಂಥಗಳಲ್ಲಿ ಉಲ್ಲೇಖವಾಗಿರುವಂತೆ ವೇದಗಳ ಕಾಲದಲ್ಲಿ ಕಂದಾಯ ಸಂಗ್ರಹಣೆ ಪ್ರಮುಖ ಉದ್ದೇಶವಾಗಿತ್ತು. ಹಾಗಾಗಿ ಜಲಾಶಯ, ಕೃಷಿ, ನೀರಾವರಿ ಮುಂತಾದವುಗಳ ಮೇಲೆ ತೆರಿಗೆ ವಿಧಿಸಿ ಆದಾಯ ಸಂಗ್ರಹಣೆ ಮಾಡಲಾಗುತಿತ್ತು. ಹೀಗೆ ಅಸ್ತಿತ್ವ ಕಂಡಕೊಂಡ ಮೌರ್ಯರ ಕಾಲದಲ್ಲಿ ಭೂ ದಾಖಲಾತಿಗಳು ಮೂರ್ತರೂಪ ಪಡೆದವು.

ಮೌರ್ಯರ ಕಾಲದಲ್ಲಿ ಭೂಮಿಯನ್ನು ಕೃಷಿತ (ಕೃಷಿ ಭೂಮಿ), ಅಕೃಷಿತ (ಪಾಳುಭೂಮಿ) ಸ್ಥಳ (ಒಳಭೂಮಿ), ಶಾಂದ (ಹಣ್ಣಿನ ತೋಟ), ವನ (ಕಾಡು) ಎಂದು ವಿಂಗಡಿಸಲಾಗುತಿತ್ತು. ಭೂಮಿ

***Please cite this article as:*** ಚನ್ನಪ್ಪ ಕೊಣನವರ. (2022). ಭೂ ದಾಖಲಾತಿ ಪದ್ಧತಿ : ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 14–17.

ಅಳತೆ ಮಾಡಲು ರಜ್ಜುಕ ಎಂಬ ಹಗ್ಗ ಉಪಯೋಗಿಸಿ, ಅಳತೆ ಮಾಡಿದ ಒಂದು ಭಾಗಕ್ಕೆ ಕಮ್ಮ/ಮಟ್ಟರ ಎಂದು ಕರೆದು ಭೂಮಿಗೆ ಎಲ್ಲೆ ಗುರುತಿಸುತ್ತಿದ್ದರು. ಹೀಗೆ ಅಳತೆ ಮಾಡಿದ ನಿರ್ದಿಷ್ಟ ಭೂಮಿಯಿಂದ ದಾಖಲೆ ಮತ್ತು ಕಂದಾಯ ಸಂಗ್ರಹಣೆಗೆ ಸ್ಥಾನಿಕ ಮತ್ತು ಗೋಪ ಎಂಬ ಅಧಿಕಾರಿಗಳಿದ್ದರು.

ರೋಮನ್ನರು ಒಂದು ಹೆಜ್ಜೆ ಮುಂದೆ ಹೋಗಿ ವೈಜ್ಞಾನಿಕ ತಳಹದಿಯ ಮೇಲೆ ಭೂ ಮಾಪನ ಮಾಡಲು ಓಡೋಮಿಟರ್ ಎಂಬ ಅಳತೆ ಚಕ್ರ ಬಳಸಿ ಅಳತೆ ಮಾಡಿದರು. ಗುಪ್ತರ ಕಾಲದಲ್ಲಿ ಕೃಷಿ ಭೂಮಿಯನ್ನು 'ಕ್ಷೇತ್ರ' ಎಂದೂ ಕೃಷಿಯೋಗ್ಯವಲ್ಲದ ಭೂಮಿಯನ್ನು 'ಖಿಲ' ಎಂದು ಕರೆಯಲಾಗುತಿತ್ತು. ಭೂಮಿಯನ್ನು ಅಳತೆ ಮಾಡುವ ವಿಧಾನಕ್ಕೆ ವಿವಿಧ ಹೆಸರುಗಳಿದ್ದವು. ಅವುಗಳೆಂದರೆ ನಿರ್ವತನ/ಕುಲ್ಯವಪ/ದ್ರೋಣವಾಸ ಮುಂತಾದವು. ಪುಷ್ಪಪಾಲ ಎಂಬ ಅಧಿಕಾರಿ ಜಿಲ್ಲೆ ಮತ್ತು ಗ್ರಾಮಗಳಿಗೆ ಸಂಬಂಧಿಸಿದ ಭೂ ದಾಖಲೆ ಮತ್ತು ಭೂ ಮಾಪನ ವಿವರಗಳನ್ನು ನಮೂದಿಸುತ್ತಿದ್ದರು. ಕವಿ ಬಾಣನ ಹರ್ಷ ಚರಿತೆ, ಪಹರಿಪುರದ ತಾಮ್ರ ಫಲಕ, ಪ್ರಭಾವತಿ ಗುಪ್ತಳ ಘೋನಾಫಲಕ ಮತ್ತು ಇನ್ನಿತರ ಶಾಸನಗಳಲ್ಲಿ ಭೂ ದಾಖಲೆ ಮತ್ತು ಭೂಮಾಪನದ ವಿವರಣೆ ಇದೆ.

ತಲಕಾಡಿನ ಗಂಗರ ಕಾಲದಲ್ಲಿ ಭೂಮಿಯನ್ನು ಕೆಪ್ಪು ಭೂಮಿ, ಕೆಂಪು ಭೂಮಿ, ಗದೆ, ಚಾಳು, ಹೊಲ ಎಂದು ವಿಂಗಡಿಸಿ ಭೂ ದಾಖಲೆ ನಿರ್ವಹಿಸುತ್ತಿದ್ದರು. ಅದೇ ರೀತ ಬಾದಾಮಿ ಚಾಲುಕ್ಯರು ಭೂ ಹಿಡುವಳಿಯನ್ನು ಕಪ್ಪು, ಕೆಂಪು ಭೂಮಿ, ತೋಟದ ಭೂಮಿ (ಭಾಗಾಯ್ತು), ಬಂಜರು ಭೂಮಿ ಎಂದು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಭೂ ದಾಖಲೆ ನಿರ್ವಹಿಸುತ್ತಿದ್ದರು. ರಾಷ್ಟ್ರಕೂಟ ಅರಸರು ಭೂ ದಾಖಲೆ ನಿರ್ವಹಿಸಲು ಗ್ರಾಮಪತಿ ಎಂಬ ಅಧಿಕಾರಿ ನೇಮಿಸಿದ್ದರು. ಭೂಮಿಯನ್ನು ತರಿ ಮತ್ತು ಖುಷ್ಕಿ ಎಂದು ವಿಂಗಡಿಸಿ ದಾಖಲೆ ನಿರ್ವಹಿಸುತ್ತಿದ್ದರು.

**ಮಧ್ಯಯುಗದ ಕಾಲದಲ್ಲಿ ಭೂ ದಾಖಲಾತಿಗಳು**

ಮಧ್ಯಯುಗದ ಕಾಲದಲ್ಲಿ ಮುಖ್ಯವಾಗಿ ಹಂಪೆ–ವಿಜಯನಗರ ಅರಸರು, ಭೂ ದಾಖಲೆ ನಿರ್ವಹಣೆಯಲ್ಲಿ ಸುಧಾರಣೆ ತಂದರು. ಭೂ ಹಿಡುವಳಿ ನಿಖರವಾಗಿ ಗುರುತಿಸಲು ಪ್ರತಿ ಭೂ ಹಿಡುವಳಿಗಳಿಗೆ ಕಲ್ಲುಗಳನ್ನು ನೆಡಲಾರಂಭಿಸಿದರು. ವಿಸ್ತೀರ್ಣವನ್ನು ಬಿತ್ತುವ ಬೀಜಗಳ ಪ್ರಮಾಣಾನುಸಾರ ನಿರ್ಧರಿಸುತ್ತಿದ್ದರು. ಇದನ್ನು "ಭೀಜವರಿ ಪದ್ಧತಿ" ಎನ್ನುತ್ತಿದ್ದರು. 10 ಸೇರು ಭೀಜ = ಕೊಳಗ ಆಗಿತ್ತು. ಒಂದು ಕೊಳಗವನ್ನು ಘಟಕ ಎನ್ನುತ್ತಿದ್ದರು. ಮುಸ್ಲಿಂ ಆಡಳಿತ ಕಾಲದಲ್ಲಿ ಷೇರಷಾಹಾ ಭೂಮಿಯನ್ನು 3 ದರ್ಜೆಯಾಗಿ ವಿಂಗಡಿಸಿ, ಭಠಾಯಿ, ನಸಖ್, ನಬ್ದಿ, ಜಮ್ಮ ಜಬ್ತಿ ಮಾದರಿ ಕಂದಾಯ ಲೆಕ್ಕಾಚಾರವಿತ್ತು.

ಮೊಘಲರ ಅಕ್ಬರನು ಭೂ ದಾಖಲೆ ಮತ್ತು ಕಂದಾಯ ವ್ಯವಸ್ಥೆ ಹೆಚ್ಚು ಸುಸಂಬದ್ಧವಾಗಿ ರೂಪಿಸಿದನು. ಭೂ ಅಳತೆ ಮಾಡಿ ಒಂದು ಪ್ರಮಾಣವನ್ನು ಭೀಘಾ ಎನ್ನುತ್ತಿದ್ದರು. (1 ಭೀಘಾ = 30 ಗುಂಟೆ) ತನಬ್ ಎಂಬ ಬಿದಿರಿನ ಕೋಲನ್ನು ಭೂ ಮಾಪನಕ್ಕೆ ಬಳಸುತ್ತಿದ್ದರು. ಭೂಮಿ ನಾಲ್ಕು ವಿಭಾಗ ಮಾಡಿ "ದ ಹಸಲ್" ಎಂಬ ವ್ಯವಸ್ಥೆಯನ್ನು ಜಾರಿಗೆ ತಂದರು. ಭೂ ದಾಖಲೆ ನಿರ್ವಹಿಸಲು ದಿವಾನ್ ಎಂಬ ಅಧಿಕಾರಿ ನೇಮಿಸಿ ಇದರೊಟ್ಟಿಗೆ ಭೂ ದಾಖಲೆ, ಭೂಮಾಪನ ಲೆಕ್ಕಪತ್ರ ಇಡಲು ಶೇಖ್‌ದಾರ್, ಅಮೀರ್, ಖಿನುಂಗೋ, ಕಾರಕೂನ್ ಎಂಬ ಅಧಿಕಾರಿ ನೇಮಿಸಿದನು.

**ಆಧುನಿಕ ಯುಗದಲ್ಲಿ ಭೂ ದಾಖಲಾತಿಗಳು**

ಭೂ ದಾಖಲಾತಿಗಳು ಅನೌಪಚಾರಿಕ ಮತ್ತು ಔಪಚಾರಿಕ ರೂಪದಲ್ಲಿ ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ರಚಿಸಿ, ನಿರ್ವಹಣೆಗೊಳಪಟ್ಟಿದ್ದವು. ಭಾರತದಾದ್ಯಂತ ಕರಾರುವಕ್ಕಾದ ಭೂಮಾಪನ ರೂಪಗೊಳಿಸಿದ್ದು (ಸರ್ವೇ) ಬ್ರೀಟಿಷರು, ಎರಡು ಶತಮಾನಗಳ ಹಿಂದೆ ಈ ಕಾರ್ಯವನ್ನು ಮದ್ರಾಸಿನ "ಸೇಂಟ್ ಥಾಮಸ್ ಮೌಂಟ್" ಎಂಬ ಸ್ಥಳದಿಂದ ಏಪ್ರಿಲ್ 10, 1802 ರಂದು ವಿಲಿಯಂ ಲ್ಯಾಂಬ್ಟನ್ ಅಧಿಕಾರಿ ನೇತೃತ್ವದಲ್ಲಿ ಆರಂಭಿಸಿದರು. ಇದರ ಸ್ಮರಣಾರ್ಥವಾಗಿ ಈ ದಿನವನ್ನು ರಾಷ್ಟ್ರೀಯ ಭೂ ಮಾಪನ ದಿನಾಚರಣೆಯನ್ನಾಗಿ ಇಂದಿಗೂ ಆಚರಿಸಿಕೊಂಡು ಬರಲಾಗುತ್ತಿದೆ.

ಮುಂದೆ ಜಾರ್ಜ ಎವರೆಸ್ಟ್ ಈ ಕಾರ್ಯ ಮುಂದುವರೆಸಿ ದಕ್ಷಿಣ ತುದಿಯಿಂದ ನೇಪಾಳದವರೆಗೆ ಸರ್ವೇ ಮಾಡಿ ವೈಜ್ಞಾನಿಕ ಮತ್ತು ನಿಖರ ದಾಖಲಾತಿಗಳ ರಚನೆಗೆ ಕಾರಣವಾದರು. ಜೊತೆಗೆ ಜಗತ್ತಿನ ಎತ್ತರದ ಶಿಖರ ಅಳತೆ ಮಾಡಿದ್ದರಿಂದ ಅವರ ಹೆಸರನ್ನು ಹಿಡಲಾಯಿತು. ಅದೇ ಇಂದಿನ ಮೌಂಟ್ ಎವರೆಸ್ಟ್.

ಹಳೇ ಮೈಸೂರು ಪ್ರಾಂತ್ಯದಲ್ಲಿ ನಿರ್ಧಿಷ್ಟ ಜಮೀನಿನ ಅಳತೆ ಗುರುತಿಸದೇ ಕಂದಾಯ ನಿರ್ಧರಿಸುವುದು ಸೂಕ್ತವಲ್ಲವೆಂದು ಅರಿತು, ಭೂಮಾಪನ, ಭೂ ದಾಖಲೆಗಳ ನಿರ್ವಹಣೆಗೆ ಮುಂದಾಗಿ ಗ್ರಾಮ ಠರಾವಣೆ (Village Settlement), ಹಿಡುವಳಿ ಠರಾವಣೆ (Individual Settlement) ಗಳನ್ನು ಜಾರಿಗೆ ತರಲಾಗಿತ್ತು.

ಮದ್ರಾಸ್ ಪ್ರಾಂತ್ಯದಲ್ಲಿ ಭೂ ದಾಖಲಾತಿಗಳನ್ನು ರಚನೆ ಮಾಡಲು ಖಾಸರ ವಿಧಾನ, ತ್ರಿಭೂಜ ವಿಧಾನ, ಸಮತಲಮೇಜು ಮೋಜಣಿ ವಿಧಾನ, ಬ್ಲಾಕ್ ನಕಾಶೆ, ಡಿ ಮತ್ತು ಓ ವಿಧಾನ ಮತ್ತು ಪುಂಗನೂರು ವಿಧಾನ ಮಾದರಿಯಲ್ಲಿ ಭೂ ದಾಖಲೆಗಳ ರಚನೆ ಮತ್ತು ನಿರ್ವಹಣೆ ಮಾಡಲಾಯಿತು. ನಂತರ ಭೂಮಿಯನ್ನು ಸರಪಳಿ ಮತ್ತು ಇತರೆ ಸಾಧನಗಳಿಂದ ಇಂಗ್ಲಿಷ್ ಮಾನಕ ಎಕರೆಯಲ್ಲಿ ಅಳೆದು 40 ಗುಂಟೆ = 1 ಎಕರೆ ಎಂದು ದಾಖಲೆ ನಿರ್ವಹಣೆ ಮಾಡಲಾಯಿತು.

ಸ್ವಾತಂತ್ರೋತ್ತರ ಭಾರತದಲ್ಲಿ 1954 ರಲ್ಲಿ ಭೂ ಹಿಡುವಳಿಗಳ ಗಣತಿಕಾರ್ಯ ಕೈಗೊಳ್ಳಲಾಯಿತು. ನಂತರ ಭಾರತ ಸಂವಿಧಾನ ಮತ್ತು ಚುನಾಯಿತ ಸರ್ಕಾರದ ವತಿಯಿಂದ ಭೂ ಸುಧಾರಣಾ ಅಧಿನಿಯಮ 1961, ಕರ್ನಾಟಕ ಭೂ ಕಂದಾಯ ಕಾಯ್ದೆ ಅಧೀನಿಯಮ 1964, ಕರ್ನಾಟಕ ಭೂ ಸುಧಾರಣೆ ನಿಯಮ 1974, ಪಿ.ಟಿ.ಸಿ.ಎಲ್ ಕಾಯ್ದೆ 1978 ರಂತೆ ಮುಂತಾದ ಕಾನೂನಿನ ಅಡಿಯಲ್ಲಿ ಪಹಣಿ ಪತ್ರಿಕೆ, ಆಕಾರ್‌ಬಂದ್, ಮುಟೇಷನ್ ಪ್ರತಿ, ಗ್ರಾಮ ನಕ್ಷೆ, ಟಿಪ್ಪಣಿ, ಇಸ್ಸಾ ನಕಾಶೆ, ಖಾಸರಾ ಪಹಣಿ, ಕಮ್ಮಿ ಜಾಸ್ತಿ ಪತ್ರಿಕೆ (ಕೆಜೆಪಿ) ಮುಂತಾದ 15–20 ಬಗೆಯ ಭೂ ದಾಖಲೆ ಕಾಣಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಬಹುತೇಕ ಎಲ್ಲಾ ಭೂ ದಾಖಲಾತಿಗಳು ಕಂಪ್ಯೂಟರೀಕರಣಗೊಂಡಿವೆ. ಹೀಗೆ ಭೂ ದಾಖಲಾತಿಗಳು ಕಂಪ್ಯೂಟರೀಕರಣ ಮತ್ತು ಡಿಜಿಟಲೀಕರಣದಿಂದಾಗಿ 24/7 ಗಂಟೆ ಬೆರಳ ತುದಿಯಲ್ಲೇ ಜಗತ್ತಿನ ಯಾವ ಮೂಲೆಯಿಂದಾದರೂ ದಾಖಲಾತಿಗಳನ್ನು ವೀಕ್ಷಿಸಬಹುದಾಗಿದೆ. 'ಭೂಮಿ' ಎಂಬ ಆನ್‌ಲೈನ್ ತಂತ್ರಾಂಶ, ಪಂಚತಂತ್ರ, ದಿಶಾಂಕ್ ಅಪ್ಲಿಕೇಷನ್, ಮತ್ತು ತೀರಾ ಇತ್ತೀಚಿನ ತಂತ್ರಾಂಶಗಳ ಮೂಲಕವೂ ಪಡೆಯಬಹುದಾಗಿದೆ.

**ಉಪಸಂಹಾರ**

ಹೀಗೆ ಭೂ ದಾಖಲೆಗಳು ವಿವಿಧ ಕಾಲಘಟ್ಟಗಳಲ್ಲಿ ರಚನೆಗೊಂಡು ವ್ಯವಸ್ಥಿತವಾಗಿ ನಿರ್ವಹಣೆಗೊಳಪಡುತ್ತಿವೆ. ಯಾವುದೇ ವ್ಯಕ್ತಿ, ಕುಟುಂಬ, ಸಮಾಜ, ದೇಶದ ಅಸ್ತಿತ್ವ ಮತ್ತು ಏಳ್ಗೆಯಲ್ಲಿ ಭೂ ದಾಖಲಾತಿಗಳು ಮಹತ್ವದ ಪಾತ್ರ ಹೊಂದಿವೆ. ಇವುಗಳನ್ನು ನಿಖರವಾಗಿ ರಚಿಸಿ, ನಿರ್ವಹಿಸಿ, ಸಂರಕ್ಷಿಸಿದ್ದೆ ಆದಲ್ಲಿ ಸ್ವಾವಲಂಬಿ, ಸುಭದ್ರ, ವ್ಯಾಜ್ಯ ರಹಿತ, ಕುಟುಂಬ–ಸಮಾಜ–ದೇಶ ನಿರ್ಮಾಣ ಮಾಡುವುದು ತುಂಬಾ ಸಹಕಾರಿಯಾಗಿವೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಭೂ ಮಾಪನ ಸಂಪದ–01 ಮೈಸೂರು: ಭೂ ಮಾಪನ ತರಬೇತಿ ಸಂಸ್ಥೆ.
- ಭೂ ಮಾಪನ ಸಂಪದ–02. ಮೈಸೂರು: ಭೂ ಮಾಪನ ತರಬೇತಿ ಸಂಸ್ಥೆ.
- ಗ್ರಾಮ ಲೆಕ್ಕಿಗರ ಕೈಪಿಡಿ. ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ.